ಅಸಲು ದಾವೆ ಸಂಖ್ಯೆ- 187/2018
ಪಿಡಬ್ಲ್ಯೂ- 02
ದಿನಾಂಕಃ 01.03.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಸಿ ಎಸ್ ಎಂ ವಕೀಲರಿಂದ

ವಾದಿ ಮತ್ತು ನನ್ನ ಮಗ ಸ್ನೇಹಿತರು ಎನ್ನುವುದು ಸರಿ. ಇವತ್ತು ಸಾಕ್ಷಿ ಹೇಳಲು ನನ್ನ ಮಗ ಕಳುಹಿಸಿರುತ್ತಾನೆ ಎಂದರೆ ಸರಿಯಲ್ಲ. ವಾದಿ ಸಾಕ್ಷಿ ಹೇಳುವಂತೆ ಕರೆದಿದ್ದರಿಂದ ಸಾಕ್ಷಿ ಹೇಳಲು ಬಂದಿದ್ದೇನೆ. ವಾದಿ ಯಾರ ವಿರುದ್ಧ ಏನು ಪರಿಹಾರ ಕೇಳಿ ದಾವೆ ಹೂಡಿರುತ್ತಾನೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಒಟ್ಟು 02 ಎಕರೆ 08 ಗುಂಟೆ ಜಮೀನು ಮಾತ್ರ ಇರುತ್ತದೆ ಅದರ ಸರ್ವೆ ನಂ1 ಎ/3 ಇರುತ್ತದೆ. ಅದನ್ನು ಹೊರತುಪಡಿಸಿ ಬೇರೆ ಜಮೀನುಗಳು ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮನೆತನದ ಹಿರೇತನವನ್ನು ವಾದಿಯರ ತಾಯಿ ಮಾಡುತ್ತಿದ್ದಳು. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆ ನನಗೆ ಗೊತ್ತಿಲ್ಲ ನಾನು ವಕೀಲರು ಸಹಿ ಮಾಡು ಅಂತಾ ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ. 6 ನೇ ಪ್ರತಿವಾದಿ ನನಗೆ ಪರಿಚಯ ಇರುತ್ತಾನೆ. 2003 ರಲ್ಲಿ 6 ನೇ ಪ್ರತಿವಾದಿ 1 ನೇ ಪ್ರತಿವಾದಿಯಿಂದ ದಾವಾ ಆಸ್ತಿ ಖರೀದಿಸಿರುತ್ತಾನೆ ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕಃ 29.08.2013 ರಲ್ಲಿ 1 ನೇ ಪ್ರತಿವಾದಿ ಅಲ್ಲಿಪುರ ಗ್ರಾಮದ ಆಸ್ತಿ ನಂ.74 ನ್ನು ಮಾರಾಟ ಮಾಡುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆಗ 6 ನೇ ಪ್ರತಿವಾದಿ ಅವತ್ತಿನ ಮಾರುಕಟ್ಟೆ ಬೆಲೆಯ ಪ್ರಕಾರ ಖರೀದಿ ಮಾಡಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಖಹರೀದಿ ಮಾಡಿಕೊಂಡ ನಂತರ ದಾವಾ ಆಸ್ತಿಯಲ್ಲಿ ಪ್ರತಿವಾದಿ ನಂ.6 ಕಿರಾಣಿ ಅಂಗಡಿ ಇಟ್ಟುಕೊಂಡಿರುತ್ತಾನೆ ಎಂದರೆ ಸರಿ, ಅದರಲ್ಲಿ ಒಂದು ಕಡೆ ವಾದಿಯರು ಇರುತ್ತಾರೆ ಒಂದು ಕಡೆ ಪ್ರತಿವಾದಿ ನಂ.6 ರವರ ಕಿರಾಣಿ ಅಂಗಡಿ ಇರುತ್ತದೆ. 2003 ರಿಂದ ಇವತ್ತಿನವರೆಗೆ ಪ್ರತಿವಾದಿ ನಂ.6 ದಾವಾ ಆಸ್ತಿಗೆ ಕಬ್ಜೆಯಲ್ಲಿದ್ದರೂ ಸಹ ಅರ್ಧ ಭಾಗದಲ್ಲಿ ವಾದಿಯರು ಇರುತ್ತಾರೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ ನಂ.1 ಮತ್ತು 5 ರವರ ಮನೆತನದ ಬಗ್ಗೆ ನನಗೆ ಗೊತ್ತಿಲ್ಲದಿದ್ದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.